**<u>ಸಾಕ್ಷಿಯನ್ನು ದಿನಾಂಕ: 17-12-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎ ಎಂ ಕೆ ವಕೀಲರಿಂದ</u>**

1. ಈ ದಾವೆಯನ್ನು ನಾವು ಹಳೇ ಸರ್ವೆ ನಂ 26, ಹೊಸ ಸರ್ವೇ ನಂ 83 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇನೆ. ಹಳೇ ಸರ್ವೆ ನಂ 26 ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಹಾಗೂ ಯಾರು ಯಾರು ಸ್ವಾಧೀನದಲ್ಲಿ ಇದ್ದರೆಂದು ನನಗೆ ಗೊತ್ತಿಲ್ಲ. ಸರ್ವೆ ನಂ 26 ಗೋಮಾಳ ಜಮೀನು ಎಂದರೆ ಸರಿ. ಸದರಿ ಸರ್ವೆ ನಂ 5 ಎಕರೆ ಜಮೀನು ಮನ್ನೋಜಿರಾವ್ ಬಿನ್ ಅಪ್ಪೋಜಿರಾವ್ ರವರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ಆ ರೀತಿ ಯಾವಾಗ ಮಂಜೂರಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಮನ್ನೋಜಿ ರಾವ್ ರವರು ಪ್ರತಿವಾದಿಯ ತಂದೆ ಎಂದರೆ ಸರಿ. ದಾವಾ ಆಸ್ತಿಯನ್ನು ನನ್ನ ತಂದೆ 1969 ನೇ ಸಾಲಿನಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ.

2. ದಿಃ 11.12.1962 ರಲ್ಲಿ ಸರ್ವೆ ನಂಬರ್ 26 ರಲ್ಲಿ 5 ಎಕರೆ ಜಮೀನು ಮನ್ನೋಜಿರಾವ್ ರವರಿಗೆ 15 ವರ್ಷ ಪರಬಾರೆ ಮಾಡಬಾರದೆಂಬ ಷರತ್ತಿನೊಂದಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. 15 ವರ್ಷ ಪರಬಾರೆ ಮಾಡಬಾರದೆಂಬ ಷರತ್ತು ಇಲ್ಲದೇ ಇರುವ ಕಾರಣ ನನ್ನ ತಂದೆ ದಾವಾ ಆಸ್ತಿಯನ್ನು 1969 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ. ನಾನು ಮನೋಜಿರಾವ್ ರವರ ಹೆಸರಿಗೆನೀಡಿರುವ ಸಾಗುವಳಿ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಗುವಳಿ ಚೀಟಿಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮನೋಜಿರಾವ್ ರವರಿಗೆ ಮಂಜೂರಾದ ನಂತರ ಅವರು ಜೀವಿಂತ ಇರುವವರೆಗೂ ದಾವಾ ಆಸ್ತಿಯಲ್ಲಿ ಅವರೇ ಸ್ವಾಧೀನದಲ್ಲಿ ಇರುತ್ತಾರೆಂದರೆ ಕ್ರಯ ಪತ್ರ ಆದ ನಂತರ ನಾವು ಸ್ವಾಧೀನದಲ್ಲಿ ಇರುತ್ತೇವೆ. ಮನೋಜಿರಾವ್ ರವರು ಅವರ ಜೀವಿತ ಅವಧಿಯಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಕ್ರಯ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನತಂದೆ ಹೆಸರಿ ಮನೋಜಿ ರಾವ್, ನನ್ನ ತಾತನ ಹೆಸರು ಪಾಪಣ್ಣ. ಕ್ರಯಪತ್ರದ ಆಧಾರದ ಮೇಲೆ ನನ್ನ ತಂದೆ ಮನೋಜಿ ರಾವ್ ಹೆಸರಿಗೆ 1969 ನೇ ಸಾಲಿನಲ್ಲಿ ದಾವಾ ಆಸ್ತಿ ಖಾತೆ ಬದಲಾವಣೆ ಆಗಿರುತ್ತದೆ. ನಿಪಿ- 6 ಮತ್ತು 7 ರ ಪಹಣಿ ಪತ್ರಕೆಗಳಲ್ಲಿ ಮನೋಜಿ ರಾವ್ ಎಂಬ ಹೆಸರನ್ನು ಮಾತ್ರ ಕಾಣಿಸಿರುತ್ತಾರೆ ಮನೋಜಿ ರಾವ್ ಬಿನ್ ಪಾಪಣ್ಣ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯಕ್ಕೆ ಪಡೆದ ನಂತರ ನನ್ನ ತಂದೆ ದಾವಾ ಆಸ್ತಿಯನ್ನು ಅಳತೆ ಮಾಡಿಸಿರುತ್ತಾರೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯನ್ನು ನನ್ನ ತಂದೆ ಅಳತೆ ಮಾಡಿಸಿರುವುದಿಲ್ಲ ಎಂದರೆ

ಸರಿಯಲ್ಲ. ದಾವಾ ಆಸ್ತಿಯನ್ನು ಮನೋಜಿ ರಾವ್ ಬಿನ್ ಅಪ್ಪೋಜಿರಾವ್ ರವರು ದರುಸ್ತಿ ಮಾಡಿಸಿದ್ದು, ಆಗ ಹೊಸ ಸರ್ವೆ ನಂ 83 ಎಂದು ನೀಡಿರುತ್ತಾರೆಂದರೆ ಸರಿ.

3. ಪೂರ್ವ ಮತ್ತು ಪಶ್ಚಿಮಕ್ಕೆ ಗೋಮಾಳ, ಉತ್ತರಕ್ಕೆ ನಮಗೆ ಸೇರಿದ ಜಮೀನು , ದಕ್ಷಿಣಕ್ಕೆ ಬರ್ಮೋಜಿ ರಾವ್ ರವರಿಗೆ ಸೇರಿದ ಚಕ್ಕುಬಂದಿ ಒಳಗಿನ ಜಮೀನು, ಉತ್ತರಕ್ಕೆ ಮನ್ನೋಜಿ ರಾವ್ ಬಿನ್ ಅಪ್ಪೋಜಿ ರಾವ್ ರವರಿಗೆ ಮರು ಮಂಜೂರಾತಿ ಆಗಿರುತ್ತದೆ. ಸರ್ವೆ ನಂ 26 ರಲ್ಲಿ ನನ್ನ ತಂದೆಗೆ ಯಾವುದೇ ಜಮೀನು ಮಂಜೂರಾಗಿರುವುದಿಲ್ಲ. ಮನ್ನೋಜಿ ರಾವ್ ರವರಿಗೆ ಮರು ಮಂಜೂರಾದ 5 ಎಕರೆ ಜಮೀನಿನ ಉತ್ತರಕ್ಕೆ ನಮಗೆ ಸೇರಿದ ಕಾಶಾಪುರ ಗ್ರಾಮದ ಸರ್ವೆ ನಂ 82 ಬರುತ್ತದೆ. ಸದರಿ ಸರ್ವೆ ನಂ 82 ರ ಹಳೇ ಸರ್ವೆ ನಂ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ನ ಚಕ್ಕುಬಂದಿ ತಪ್ಪಾಗಿ ಕಾಣಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಷೆಡಲ್ ನಲ್ಲಿ ಕಾಣಿಸಿರುವ ಚಕ್ಕುಬಂದಿಒಳಗೆ ಸರ್ವೆ ನಂ 83 ಬರುವುದಿಲ್ಲ ಎಂದರೆ ಸರಿಯಲ್ಲ. 2020-21 ನೇ ಸಾಲಿನವರೆಗೂ ನನ್ನತಂದೆ ಹೆಸರಿಗೆ ಸರ್ವೆ ನಂ 83ರ ಖಾತೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಗೊತ್ತಿಲ್ಲದ ಹಾಗೆ 2020-21 ನೇ ಸಾಲಿನಲ್ಲಿ ನಾವು ನಮ್ಮ ತಂದೆ ಹೆಸರಿಗೆ ದಾವಾ ಆಸ್ತಿಯ ಖಾತೆಯನ್ನು ಬದಲಾವಣೆ ಮಾಡಿಸಿಕೊಂಡಿರುತ್ತೇವೆ ಎಂದರೆ, ನನ್ನ ಅಣ್ಣ 1980 ನೇ ಸಾಲಿನಲ್ಲಿ ತೀರಿಕೊಂಡಿದ್ದು ನನಗೆ ಬುದ್ಧಿ ಬಂದ ನಂತರ 2017 ನೇ ಸಾಲಿನಲ್ಲಿ ಬೇರೆಯವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದು ಆ ನಂತರ ನಾನು ಎ ಸಿ ನ್ಯಾಯಾಲಯದಲ್ಲಿ ಸದರಿ ಖಾತೆಯನ್ನು ಪ್ರಶ್ನೆ ಮಾಡಿ ಎ ಸಿ ನ್ಯಾಯಾಲಯದ ಆದೇಶದಂತೆ ನನ್ನ ತಂದೆ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ. ಮೊದಲಿಗೆ ಮನ್ನೋಜಿರಾವ್ ಬಿನ್ ಅಪ್ಪೋಜಿ ರಾವ್ ಹೆಸರಿನಲ್ಲಿ ಖಾತೆ ಇದ್ದು ಅವರು ತೀರಿಕೊಂಡ ನಂತರ ಪ್ರತಿವಾದಿ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆಂದರೆ ಸರಿ. ನಂತರ ದಾವಾ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದು ಅವರೇ ಅನುಭವಿಸಿಕೊಂಡು ಹೋಗುತ್ತಿರುತ್ತಾರೆಂದರೆ ಸರಿಯಲ್ಲ. ನಾವೇ ಸ್ವಾಧೀನದಲ್ಲಿರುತ್ತೇವೆ. ದಾವಾ ಆಸ್ತಿಯಲ್ಲಿ ನಾವು ಮತ್ತು ನನ್ನ ತಂದೆ ಯಾವುತ್ತು ಸ್ವಾಧೀನದಲ್ಲಿ ಇಲ್ಲದೇ ಇರುವ ಕಾರಣ ದಾವಾ ಆಸ್ತಿಯ ಖಾತೆಯನ್ನು ನನ್ನ ತಂದೆ ಹಾಗೂ ನಮ್ಮ ಹೆಸರಿಗೆ 2020-21 ನೇ ಸಾಲಿನವರೆಗೂ ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಹಳೇ ಸರ್ವೆ ನಂ 26 ಹೊಸ ಸರ್ವೆ ನಂ 83 ಎರಡನ್ನೂ ಬರೆದಿರುತ್ತಾರೆ. ನಮ್ಮ ಗ್ರಾಮದಲ್ಲಿ ಅಪ್ಪಾಜಿ ರಾವ್ ರವರ ಮಗ ಮನ್ನೋಜಿ ರಾವ್ ಎಂಬುವರ ಒಬ್ಬರು ಮಾತ್ರ ಇದ್ದರು. ನಮ್ಮ ಗ್ರಾಮದಲ್ಲಿ ಮನ್ನೋಜಿ ರಾವ್ ಎಂಬ ಹೆಸರಿನ 10 ಜನರು ಇರುತ್ತಾರೆ. ಪ್ರತಿವಾದಿ ನನ್ನ ದೂರದ

ಸಂಬಂಧಿಕರು. ಮನ್ನೋಜಿ ರಾವ್ ಬಿನ್ ಅಪ್ಪೋಜಿ ರಾವ್ ರವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಂ ದೆ ಹೆಸರಿಗೆ ಕ್ರಯ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**